| KARNATAKA MARITIME BOARD<br>BENGALURU | | |
|---|---|---|
| Name of the Newspaper | KANNADA PRABHA | |
| Date | 06-04-2024 | **Language – KANNADA** |

ಕನ್ನಡಪ್ರಭ

# ದೇಶದ ಆರ್ಥಿಕತೆ ಸದೃಢಕ್ಕೆ ಜಲ ಸಾರಿಗೆ ಪೂರಕ: ಜಯರಾಮ್

## ಕಾರವಾರದಲ್ಲಿ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮ




ಕಾರವಾರದಲ್ಲಿ ನಡೆದ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಕಾರವಾರ

ಜಾಗತಿಕ ಸರಬರಾಜು ವ್ಯವಸ್ಥೆಯ ಅತ್ಯಂತ ಪ್ರಮುಖ ಸಾಧನವಾಗಿರುವ ಜಲಸಾರಿಗೆಯನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಮೂಲಕ ದೇಶದ ಮತ್ತು ರಾಜ್ಯದ ಆರ್ಥಿಕ ಶಕ್ತಿ ಸದೃಢಗೊಳ್ಳಲು ಸಾಧ್ಯವಾಗಲಿದೆ ಎಂದು ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ತಿಳಿಸಿದರು.

ನಗರದ ಬಂದರು ಮಂಡಳಿ ಕಚೇರಿ ಆವರಣದಲ್ಲಿ ಶುಕ್ರವಾರ ನಡೆದ 61ನೇ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತದಲ್ಲಿ ಜಲಸಾರಿಗೆ ವ್ಯವಸ್ಥೆಯು ನಿಧಾನವಾಗಿ ಆರಂಭವಾದರೂ ಪ್ರಸ್ತುತ ಅಂತಾರಾಷ್ಟ್ರೀಯಮಟ್ಟದಆರ್ಥಿಕವ್ಯವಸ್ಥೆಯೊಂದಿಗೆ ಅವಿನಭಾವ ಸಂಬಂಧ ಹೊಂದಿದ್ದು, ಆಮದು ಮತ್ತು ರಫ್ತು ವಹಿವಾಟಿನಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಆದರೆ ದೇಶದಲ್ಲಿ ಜಲಸಾರಿಗೆ ವ್ಯವಸ್ಥೆಯ ಬೆಳವಣಿಗೆಗೆ ಇನ್ನೂ ವಿಪುಲ ಅವಕಾಶಗಳಿದ್ದು, ಇವುಗಳನ್ನು ಬಳಸಿಕೊಂಡಲ್ಲಿ ದೇಶದ ಆರ್ಥಿಕ ಬಲವರ್ಧನೆ ಇನ್ನಷ್ಟು ವೃದ್ಧಿಸಲಿದೆ ಎಂದರು.

ಮಂಗಳೂರು ದಕ್ಷಿಣದಲ್ಲಿ ಅಂತಾರಾಷ್ಟ್ರೀಯ ಕ್ರೂಸ್ ಮತ್ತು ಟೂರಿಸಂ ಪೋರ್ಟ್ ನಿರ್ಮಾಣ ಮಾಡಲಾಗುತ್ತಿದ್ದು, ಕರಾವಳಿ ಪ್ರದೇಶಗಳಲ್ಲಿ ಹಡಗುಗಳ ನಿರ್ಮಾಣ ಮತ್ತು ದುರಸ್ತಿ ಉದ್ಯಮಕ್ಕೆ ಉತ್ತಮ ಅವಕಾಶವಿದ್ದು, ಈ ಭಾಗದಲ್ಲಿ ಗಾಳಿಯಿಂದ ವಿದ್ಯುತ್ ಉತ್ಪಾದನೆಗೆ ಹಾಗೂ ಪ್ರವಾಸೋದ್ಯಮ ಮತ್ತು ಮೀನುಗಾರಿಕಾ ಚಟುವಟಿಕೆಗಳ ಅಭಿವೃದ್ಧಿಗೆ ಬಂದರು ಮಂಡಳಿಯಿಂದ ಎಲ್ಲಾ ರೀತಿಯ ಸಹಕಾರವನ್ನೂ ನೀಡಲಾಗುತ್ತದೆ ಎಂದರು.

ಕರ್ನಾಟಕ ನೇವಲ್ ಏರಿಯದ ಕಮಾಂಡಿಂಗ್ ಫ್ಲಾಗ್ ಆಫೀಸರ್‌ರಿಯರ್ ಅಡ್ಮಿರಲ್ ಕೆ.ಎಂ. ರಾಮಕೃಷ್ಣನ್ ಮಾತನಾಡಿ, ಪ್ರಪಂಚದ ಶೇ. 90ರಷ್ಟು ಆರ್ಥಿಕ ಚಟುವಟಿಕೆ ನೌಕಾಯಾನದ ಮೂಲಕ ನಡೆಯುತ್ತಿದೆ. ಈ ವ್ಯವಸ್ಥೆ ಸುಗಮವಾಗಿ ನಡೆಯಲು ಅಂತಾರಾಷ್ಟ್ರೀಯ ಸಹಕಾರ ಅಗತ್ಯ. ಈ ಕುರಿತಂತೆ ನೌಕಾನೆಲೆಯಿಂದ ವಿವಿಧ ರಾಷ್ಟ್ರಗಳ ನಡುವೆ ಅಗತ್ಯ ಮಾಹಿತಿಗಳ ವಿನಿಮಯ ಮತ್ತು ಸಂಕಷ್ಟಕ್ಕೆ ಸಿಲುಕುವ ಹಡಗುಗಳು ಮತ್ತು ನೌಕಾ ಸಿಬ್ಬಂದಿ ರಕ್ಷಣೆ ಮಾಡಲಾಗುತ್ತಿದೆ ಎಂದರು.

ಕಾರವಾರ ನೇವಲ್ ಬೇಸ್‌ನ ಚೀಫ್ ಸ್ಟಾಫ್ ಆಫೀಸರ್‌ಕಮಾಂಡರ್‌ಆಶೀಶ್ ಗೋಯೆಲ್, ಕಾರವಾರ ಬಂದರು ಅಧಿಕಾರಿ ರಾಜ್‌ಕುಮಾರ್ ಹೆಡೆ, ಬಂದರು ಮಂಡಳಿಯ ಚೀಫ್ ಎಂಜಿನಿಯರ್ ಪ್ರವೀಣ್, ಲೆಕ್ಕಾಧಿಕಾರಿ ಸಂಗೀತಾ ಭಟ್, ಬಂದರು ನಿರ್ದೇಶಕ ಕ್ಯಾ. ಸ್ವಾಮಿ, ಸುರೇಶ್ ಶೆಟ್ಟಿ ಇದ್ದರು.

**ರಾಜ್ಯದಲ್ಲಿ ಕಾರವಾರ ಬಂದರು ಮೂಲಕ ಹೆಚ್ಚಿನ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅವಕಾಶಗಳಿದ್ದು, ಈ ಬಂದರನ್ನು 5 ಹಂತದಲ್ಲಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದ್ದು ಮುಂದಿನ 5 ವರ್ಷದಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದೆ. ಈಗಾಗಲೇ 8 ಮೀ. ವರೆಗೆ ಡ್ರೆಜಿಂಗ್ ನಡೆಸಲಾಗಿದೆ. ಅಲ್ಲದೇ ಕೇಣಿ ಬಂದರು, ಪಾವಿನಕುರ್ವೆ, ಮಂಕಿ ಹೊನ್ನಾವರ ಬಂದರುಗಳನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ.**

• **ಜಯರಾಮ್ ರಾಯಪುರ** ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

| KARNATAKA MARITIME BOARD<br>BENGALURU | | |
|---|---|---|
| Name of the Newspaper | VIJAYA KARNATAKA | |
| Date | 06-04-2024 | **Language – KANNADA** |

VK ವಿಜಯ ಕರ್ನಾಟಕ e-paper

ಬಂದರು ಇಲಾಖೆ ನೌಕರರಿಗೆ ಕ್ರೀಡಾಕೂಟ | ವಿಜೇತ ತಂಡಗಳಿಗೆ ಬಹುಮಾನ

# 5 ಹಂತದಲ್ಲಿ ಬಂದರು ಅಭಿವೃದ್ಧಿ

**ವಿಕ ಸುದ್ದಿಲೋಕ** ಕಾರವಾರ

ಮುಂದಿನ ಐದು ವರ್ಷಗಳಲ್ಲಿ ಕಾರವಾರದ ಬಂದರನ್ನು ಐದು ಹಂತದಲ್ಲಿ ಅಭಿವೃದ್ಧಿ ಮಾಡುವ ಯೋಜನೆ ಇದೆ ಎಂದು ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಜಯರಾಮ ರಾಯ್ಪುರ ಹೇಳಿದರು.



ಕಾರವಾರದಲ್ಲಿ ರಾಷ್ಟ್ರೀಯ ಜಲಸಾರಿಗೆ ದಿನಾಚರಣೆ ಕಾರ್ಯಕ್ರಮದಲ್ಲಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಜಯರಾಮ ರಾಯ್ಪುರ ಮಾತನಾಡಿದರು.

## 61ನೇ ರಾಷ್ಟ್ರೀಯ ಜಲಸಾರಿಗೆ ದಿನಾಚರಣೆ

ನಗರದ ಬಂದರು ಮತ್ತು ಒಳನಾಡು ಜಲಸಾರಿಗೆ ಮಂಡಳಿಯ ಕಚೇರಿಯ ಬಳಿ ಬಂದರು ಇಲಾಖೆ ಹಾಗೂ ನೌಕಾನೆಲೆಯ ವತಿಯಿಂದ ಶುಕ್ರವಾರ ನಡೆದ 61ನೇ ರಾಷ್ಟ್ರೀಯ ಜಲಸಾರಿಗೆ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

"ಬಂದರು ಅಭಿವೃದ್ಧಿಗೆ ನ್ಯಾಯಾಲಯ ಒಪ್ಪಿಗೆ ನೀಡುತ್ತಿದ್ದಂತೆಯೇ ಕಾಮಗಾರಿ ಪ್ರಾರಂಭಿಸುತ್ತೇವೆ. ಕಾರವಾರದ ಬಂದರು ಮಾತ್ರವಲ್ಲದೆ ಅಂಕೋಲಾದ ಕೇಣಿ ಬಂದರು ವರ್ಷಕ್ಕೆ 30 ಮಿಲಿಯನ್ ಟನ್‌ನಷ್ಟು ವಹಿವಾಟು ನಡೆಸುತ್ತದೆ. ಹೀಗಾಗಿ ಈ ಬಂದರು ಕೂಡಾ ಅಭಿವೃದ್ಧಿಯಾಗಲಿದೆ. ಇದರಿಂದ ಜಿಲ್ಲೆಯು ಕೂಡ ಆರ್ಥಿಕವಾಗಿ ಮುಂದುವರೆಯುತ್ತದೆ. ಜತೆಗೆ ಹೊನ್ನಾವರ, ಮಾವಿನ ಕುರ್ವಾ, ಮಂಕಿ ಬಂದರುಗಳನ್ನು ಅಭಿವೃದ್ಧಿ ಮಾಡಿ ದೇಶದ ಆರ್ಥಿಕತೆಗೆ ಕೊಡುಗೆ ನೀಡಲಿದ್ದೇವೆ." ಎಂದರು.

"ದೇಶವು ಜಾಗತಿಕವಾಗಿ ಮುಂದುವರಿಯಲು ಆಮದು ಪ್ರಮಾಣದಷ್ಟೇ ರಫ್ತು ಮಾಡಬೇಕು. ಸರಕಾರಗಳು ಜಲ ಸಾರಿಗೆಗೆ ಶಕ್ತಿ ನೀಡದಿದ್ದರೆ ಆರ್ಥಿಕತೆ ಕುಸಿಯಲಿದೆ. ಮುಂದಿನ ಭವಿಷ್ಯಕ್ಕಾಗಿ ಕೆಲಸ ಮಾಡಬೇಕು. ದೇಶದಲ್ಲಿ ಉಡುಪಿ ಮತ್ತು ಮಂಗಳೂರು ಪ್ರದೇಶವು ಹಡಗು ನಿರ್ಮಾಣ ಕಾರ್ಯಕ್ಕೆ ಉತ್ತಮ ತಾಣಗಳಾಗಿವೆ. ಸದ್ಯ ದಕ್ಷಿಣ ಮಂಗಳೂರಿನಲ್ಲಿ ಅಂತಾರಾಷ್ಟ್ರೀಯ ಕ್ರೂಸ್ ಬಂದರು ಮಾಡುತ್ತೇವೆ. ಜತೆಗೆ ಕರ್ನಾಟಕದ ಕರಾವಳಿಯಲ್ಲಿ ವಿದ್ಯುತ್ ಉತ್ಪಾದನೆ ಬಗ್ಗೆ ಯೋಚಿಸುತ್ತಿದ್ದೇವೆ." ಎಂದರು.

ನೌಕಾ ಪಡೆಯ ಕರ್ನಾಟಕ ವಲಯದ ಫ್ಲ್ಯಾಗ್ ಆಫೀಸರ್ ರೀರ್ ಅಡ್ಮಿರಲ್ ಕೆ.ಎಂ ರಾಮಕೃಷ್ಣನ್ ಮಾತನಾಡಿ, "ದೇಶದ ಆರ್ಥಿಕತೆಗೆಯಲ್ಲಿ ಶೇ. 90 ರಷ್ಟು ಸಮುದ್ರ ಮಾರ್ಗದಿಂದ ಬರುತ್ತದೆ. ಭದ್ರತೆಯನ್ನು ಹೊರತುಪಡಿಸಿ ಸಮುದ್ರಕ್ಕೆ ಯಾವುದೇ ಗಡಿ ಇರುವುದಿಲ್ಲ. ಹೀಗಾಗಿ ಸಮುದ್ರದಲ್ಲಿ ಯಾವುದೆ ಅನಾಹುತ ಸಂಭವಿಸಿದರೆ ಒಂದು ದೇಶ ಬಗೆಹರಿಸಲು ಸಾಧ್ಯವಿಲ್ಲ. ಆದಕ್ಕಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಕ್ಕೂಟಗಳಾಗಬೇಕು." ಎಂದರು.

ಕಾರವಾರ ನೌಕಾಪ್ರದೇಶದ ಕಮಾಂಡರ್ ಆಶಿಶ್ ಗೋಯಲ್, ಬಂದರು ಮತ್ತು ಜಲಸಾರಿಗೆ ಇಲಾಖೆಯ ನಿರ್ದೇಶಕ ಕ್ಯಾಪ್ಟನ್ ಸ್ವಾಮಿ, ಬಂದರು ಮತ್ತು ಜಲಸಾರಿಗೆ ಇಲಾಖೆಯ ಮುಖ್ಯ ಎಂಜಿನಿಯರ್ ಪ್ರವೀಣ, ಮುಖ್ಯ ಅಕೌಂಟ್ ಅಧಿಕಾರಿ ಸಂಗೀತಾ ಭಟ್, ಬಂದರು ಅಧಿಕಾರಿ ರಾಜಕುಮಾರ ಹಾಗೂ ನೌಕಾದಳದ ಸಿಬ್ಬಂದಿ ಇದ್ದರು.

> **ದೇಶವು ಜಾಗತಿಕವಾಗಿ ಮುಂದುವರಿಯಲು ಆಮದು ಪ್ರಮಾಣದಷ್ಟೇ ರಫ್ತು ಮಾಡಬೇಕು. ಸರಕಾರಗಳು ಜಲ ಸಾರಿಗೆಗೆ ಶಕ್ತಿ ನೀಡದಿದ್ದರೆ ಆರ್ಥಿಕತೆ ಕುಸಿಯಲಿದೆ.**
>
> **-ಜಯರಾಮ ರಾಯ್ಪುರ,**
> ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ

| KARNATAKA MARITIME BOARD<br>BENGALURU | | |
|---|---|---|
| Name of the Newspaper | **PRAJAVANI** | |
| Date | 06-04-2024 | **Language – KANNADA** |

ಜಲಸಾರಿಗೆ ದಿನ: ಬಂದರು, ಜಲಸಾರಿಗೆ ಮಂಡಳಿ ಸಿಇಒ ಜಯರಾಮ ಘೋಷಣೆ

# ಐದು ಹಂತದಲ್ಲಿ ಕಾರವಾರ ಬಂದರು ವಿಸ್ತರಣೆ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಅನುಮತಿ ಸಿಕ್ಕ ತಕ್ಷಣ ಕಾರ್ಯ ಆರಂಭ
- ಮಂಗಳೂರಿನಲ್ಲಿ ದೇಶದ ಮೊದಲ ಕ್ರೂಸ್ ಬಂದರು ನಿರ್ಮಾಣ

ಕಾರವಾರ: 'ಕಾರವಾರ ವಾಣಿಜ್ಯ ಬಂದರನ್ನು ಐದು ಹಂತದಲ್ಲಿ ವಿಸ್ತರಿಸಲಾಗುತ್ತಿದೆ. ರಾಷ್ಟ್ರೀಯ ಹಸಿರು ಪೀಠದ ಅನುಮತಿ ಸಿಕ್ಕ ತಕ್ಷಣವೇ ಬಂದರು ವಿಸ್ತರಣೆ ಕಾರ್ಯ ಆರಂಭಗೊಳ್ಳಲಿದೆ. ಮುಂದಿನ ಐದು ವರ್ಷಗಳಲ್ಲಿ ಈ ಕಾರ್ಯಗಳು ಪೂರ್ಣಗೊಳ್ಳುವ ವಿಶ್ವಾಸವಿದೆ' ಎಂದು ಬಂದರು, ಜಲಸಾರಿಗೆ ಮಂಡಳಿ ಸಿಇಒ ಜಯರಾಮ ರಾಯಪುರ ಹೇಳಿದರು.

ಇಲ್ಲಿನ ಬಂದರು ಮತ್ತು ಒಳನಾಡು ಜಲಸಾರಿಗೆ ಮಂಡಳಿ ಕಚೇರಿ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 61ನೇ ರಾಷ್ಟ್ರೀಯ ಜಲಸಾರಿಗೆ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಖಾಸಗಿ ಸಹಕಾರದಲ್ಲಿ ಕೇಣಿ, ಪಾವಿನಕುರ್ವೆಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಬಂದರು ನಿರ್ಮಾಣಕ್ಕೆ ತಯಾರಿ ನಡೆದಿದೆ. ಮಂಕಿಯಲ್ಲಿಯೂ 5 ಎಂಟಿಪಿ ಸಾಮರ್ಥ್ಯದ ಬಂದರು ನಿರ್ಮಾಣಕ್ಕೆ ಯೋಜನೆ ರೂಪಿಸಲಾಗುತ್ತಿದೆ. ಮಂಗಳೂರಿನಲ್ಲಿ ದೇಶದಲ್ಲೇ ಮೊದಲ ಕ್ರೂಸ್ ಬಂದರು ನಿರ್ಮಾಣ ಆಗಲಿದೆ' ಎಂದರು.

ನೌಕಾದಳದ ಕರ್ನಾಟಕ ವಿಭಾಗದ ಮುಖ್ಯಸ್ಥ ರಿಯರ್ ಅಡ್ಮಿರಲ್ ಕೆ.ಎಂ.ರಾಮಕೃಷ್ಣನ್, 'ದೇಶದ ಶೇ 90 ರಷ್ಟು ಆರ್ಥಿಕತೆ ಜಲಸಾರಿಗೆಯ ಮೇಲೆ ನಿಂತಿದೆ. ಈ ಕ್ಷೇತ್ರದ ಏಳ್ಗೆಯು ಆರ್ಥಿಕತೆಯನ್ನು ಉತ್ತೇಜಿಸಬಲ್ಲದು. ಹಡಗುಗಳ ಅವಘಡ ಸಂಭವಿಸಿದರೆ ಹಲವು ದೇಶಗಳಿಗೆ ನಷ್ಟ ಉಂಟಾಗುತ್ತದೆ. ಹೀಗಾಗಿ ಅವುಗಳ ರಕ್ಷಣೆ ಕಾರ್ಯ ಮುಖ್ಯವಾಗಿದೆ'ಎಂದರು.

ಕಾರವಾರ ನೌಕಾನೆಲೆಯ ಸಿಬ್ಬಂದಿ ವಿಭಾಗದ ಮುಖ್ಯಸ್ಥ ಕಮೊಡೋರ್ ಆಶಿಶ್ ಗೋಯಲ್, ಬಂದರು ಜಲಸಾರಿಗೆ ಮಂಡಳಿಯ ಮುಖ್ಯ ಲೆಕ್ಕಾಧಿಕಾರಿ ಸಂಗೀತಾ ಭಟ್, ಮಂಗಳೂರು ಬಂದರಿನ ಹಿರಿಯ ಅಧಿಕಾರಿ ಅಹಿನ್ ನಂದಿ, ಗ್ರಾಸಿಮ್ ಇಂಡಸ್ಟ್ರೀಸ್ ಘಟಕ ಮುಖ್ಯಸ್ಥ ಕುಶ್ ಶರ್ಮಾ, ರಾಜವೀರ ಸಿಂಗ್, ಮುಖ್ಯ ಎಂಜಿನಿಯರ್ ಪ್ರಮೀತ್, ಬಂದರು ಅಧಿಕಾರಿ ರಾಜಕುಮಾರ ಹೆಡೆ ಇದ್ದರು.

ಬಂದರು, ಒಳಸಾರಿಗೆ ಮಂಡಳಿಯ ನಿರ್ದೇಶಕ ಕ್ಯಾಪ್ಟನ್ ಸಿ.ಸ್ವಾಮಿ ಸ್ವಾಗತಿಸಿದರು. ಬಂದರು ಅಧೀಕ್ಷಕ ಸುರೇಶ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.




ಕಾರವಾರದಲ್ಲಿ ನಡೆದ 61ನೇ ರಾಷ್ಟ್ರೀಯ ಜಲಸಾರಿಗೆ ದಿನಾಚರಣೆ ಕಾರ್ಯಕ್ರಮದಲ್ಲಿ ಬಂದರು, ಒಳನಾಡು ಜಲಸಾರಿಗೆ ಮಂಡಳಿಯ ಸಿಇಒ ಜಯರಾಮ ರಾಯಪುರ ಮಾತನಾಡಿದರು

| KARNATAKA MARITIME BOARD<br>BENGALURU | | |
|---|---|---|
| Name of the Newspaper | SAMYUKTA KARNATAKA | |
| Date | 06-04-2024 | **Language – KANNADA** |

# ಜಲ ಸಾರಿಗೆಯಿಂದ ಆರ್ಥಿಕ ಶಕ್ತಿ ಸದೃಢ : ಜಯರಾಮ್




**ಕಾರವಾರದ ಮಂದರಿ ಮಂಡಳಿ ಕಚೇರಿಯಲ್ಲಿ ನೌಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಮಾತನಾಡಿದರು.**

**ಕಾರವಾರ:** ಜಾಗತಿಕ ಸರಬರಾಜು ವ್ಯವಸ್ಥೆಯ ಅತ್ಯಂತ ಪ್ರಮುಖ ಸಾಧನವಾಗಿರುವ ಜಲಸಾರಿಗೆಯನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಮೂಲಕ ದೇಶದ ಮತ್ತು ರಾಜ್ಯದ ಆರ್ಥಿಕ ಶಕ್ತಿ ಸದೃಢಗೊಳ್ಳಲು ಸಾಧ್ಯವಾಗಲಿದೆ ಎಂದು ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಹೇಳಿದರು.

ಕಾರವಾರದ ಬಂದರು ಮಂಡಳಿ ಕಚೇರಿ ಆವರಣದಲ್ಲಿ ನಡೆದ 61 ನೇ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯದಲ್ಲಿ ಕಾರವಾರ ಬಂದರು ಮೂಲಕ ಹೆಚ್ಚಿನ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅವಕಾಶಗಳಿದ್ದು, ಈ ಬಂದರನ್ನು 5 ಹಂತದಲ್ಲಿ ಅಭಿವೃದ್ದಿಪಡಿಸಲು ಯೋಜನೆ ರೂಪಿಸಲಾಗಿದ್ದು, ಮುಂದಿನ 5 ವರ್ಷದಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದ್ದು ಈಗಾಗಲೇ 8 ಮೀಟರ್ ವರೆಗೆ ಡ್ರಜಿಂಗ್ ನಡೆಸಲಾಗಿದೆ. ಅಲ್ಲದೇ ಕೇಣಿ ಬಂದರು, ಪಾವಿನಕುರ್ವೆ, ಮಂಕಿ ಹೊನ್ನಾವರ ಬಂದರುಗಳನ್ನೂ ಕೂಡಾ ಅಭಿವೃದ್ಧಿಪಡಿಸ ಲಾಗುತ್ತಿದೆ ಎಂದರು.

ಕರ್ನಾಟಕ ನೇವಲ್ ಏರಿಯದ ಕಮಾಂಡಿಂಗ್ ಫ್ಲಾಗ್ ಆಫೀಸರ್ ರಿಯರ್ ಅಡ್ಮಿರಲ್ ಕೆ.ಎಂ. ರಾಮಕೃಷ್ಣನ್ ಮಾತನಾಡಿ, ಪ್ರಪಂಚದ ಶೇ.90 ರಷ್ಟು ಆರ್ಥಿಕ ಚಟುವಟಿಕೆ ನೌಕಾಯಾನದ ಮೂಲಕ ನಡೆಯುತ್ತಿದೆ, ಈ ವ್ಯವಸ್ಥೆ ಸುಗಮವಾಗಿ ನಡೆಯಲು ಅಂತಾರಾಷ್ಟ್ರೀಯ ಸಹಕಾರ ಅಗತ್ಯವಾಗಿದ್ದು, ಈ ಕುರಿತಂತೆ ನೇವಿಯಿಂದ ವಿವಿಧ ರಾಷ್ಟ್ರಗಳ ನಡುವೆ ಅಗತ್ಯ ಮಾಹಿತಿಗಳ ವಿನಿಮಯ ಮತ್ತು ಸಂಕಷ್ಟಕ್ಕೆ ಸಿಲಕುವ ಹಡಗುಗಳು ಮತ್ತು ನೌಕಾ ಸಿಬ್ಬಂದಿಗಳ ರಕ್ಷಣೆಯನ್ನು ಮಾಡಲಾಗುತ್ತಿದೆ ಎಂದರು.

| **KARNATAKA MARITIME BOARD<br>BENGALURU** | | |
|---|---|---|
| Name of the Newspaper | VIJAYAVANI | |
| Date | 06-04-2024 | **Language – KANNADA** |



ಕರ್ನಾಟಕ ಮೆರಿಟೈಮ್ ಬೋರ್ಡ್ ಸಿಇಒ ಜಯರಾಮ್ ರಾಯಪುರೆ ಮಾಹಿತಿ | ರಾಷ್ಟ್ರೀಯ ಕಡಲ ದಿನ ಆಚರಣೆ

# ಉತ್ತರ ಕನ್ನಡದ ಐದು ವಾಣಿಜ್ಯ ಬಂದರುಗಳ ಅಭಿವೃದ್ಧಿ

■ ವಿಜಯವಾಣಿ ಸುದ್ದಿಜಾಲ ಕಾರವಾರ

ಇನ್ನು ಐದು ವರ್ಷಗಳಲ್ಲಿ ಉತ್ತರ ಕನ್ನಡದಲ್ಲಿ 5 ವಾಣಿಜ್ಯ ಬಂದರುಗಳು ಅಭಿವೃದ್ಧಿ ಹೊಂದಲಿವೆ ಎಂದು ಕರ್ನಾಟಕ ಮೆರಿಟೈಮ್ ಬೋರ್ಡ್(ಕೆಎಂಬಿ)ನ ಸಿಇಒ ಜಯರಾಮ್ ರಾಯಪುರೆ ಹೇಳಿದರು.

ಕೆಎಂಬಿ ಕಚೇರಿಯ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರೀಯ ಕಡಲ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಶೇ.90 ರಷ್ಟು ಆರ್ಥಿಕತೆ ಸಾಗರ ವಹಿವಾಟಿನ ಮೇಲೆ ನಿಂತಿದೆ. ಆದರೆ, ಕರ್ನಾಟಕ ರಾಜ್ಯ ವಿಳಂಬವಾಗಿ ಎಚ್ಚೆತ್ತುಕೊಂಡು ಈ ಕ್ಷೇತ್ರ ಅಭಿವೃದ್ಧಿಗೆ ಮುಂದಾಗಿದೆ. 2019ರಲ್ಲಿ ಕರ್ನಾಟಕ ಮೆರಿಟೈಮ್ ಬೋರ್ಡ್ ಸ್ಥಾಪನೆಯಾಗಿದ್ದು, ಹಲವು ಬಂದರುಗಳ ಅಭಿವೃದ್ಧಿಯತ್ತ ಯೋಜನೆ ರೂಪುಗೊಂಡಿದೆ. ಕಾರ್ಯಗತ ಮಾಡುವುದು ಬಾಕಿ ಇದೆ.

ಕಾರವಾರ ಬಂದರನ್ನು 5 ಹಂತದಲ್ಲಿ ಅಭಿವೃದ್ಧಿ ಮಾಡಲು ಯೋಜನೆ ರೂಪಿಸಲಾಗಿದೆ. ಅದರಲ್ಲಿ 1ಎ ಕಾಮಗಾರಿಯ ಟೆಂಡರ್ ಆಗಿದ್ದು, ಕಾಮಗಾರಿ ಹಸಿರು ನ್ಯಾಯಮಂಡಳಿಯಲ್ಲಿ ವಿಚಾರಣೆ ಹಂತದಲ್ಲಿದೆ. ಮಂಡಳಿ ಆದೇಶ ಬಂದ ತಕ್ಷಣ ಬಂದರಿನ ಕಾಮಗಾರಿ ಪ್ರಾರಂಭಿಸಲಾಗುವುದು. ಸಾಗರ ಮಾಲಾ ಯೋಜನೆಯಲ್ಲಿ 1ಬಿ ಕಾಮಗಾರಿಗೆ ಅನುಮೋದನೆ ದೊರಕಿದ್ದು, ರಾಜ್ಯ ಸರ್ಕಾರ ಅದಕ್ಕೆ ಅನುಮೋದನೆ ನೀಡಬೇಕಿದೆ. ಹಾಲಿ ಬಂದರಿನ ಹೂಳೆತ್ತುವ ಕಾಮಗಾರಿ ಮುಗಿದಿದ್ದು, ದಕ್ಕೆಯನ್ನು ಘಟ್ಟಿಗೊಳಿಸುವ ಕಾರ್ಯ ಕೈಗೊಳ್ಳಲಾಗುವುದು ಎಂದರು.

ಇನ್ನು ಕೇಣಿಯಲ್ಲಿ ವರ್ಷಕ್ಕೆ 30 ಮೆಟ್ರಿಕ್ ಟನ್ ನಿರ್ವಹಣಾ ಸಾಮರ್ಥ್ಯದ ಬಂದರನ್ನು ಜೆಎಸ್‌ಡಬ್ಲು ನಿರ್ಮಾಣ ಮಾಡುತ್ತಿದೆ. 10 ವರ್ಷದ ಹಿಂದೆಯೇ ಒಪ್ಪಂದವಾದ 5 ಎಂಟಿಪಿಎ ಹೊನ್ನಾವರ ಕಾಸರಕೋಡು ಬಂದರು ಕಾಮಗಾರಿಯನ್ನು ಎಚ್‌ಪಿಪಿಎಲ್ ಕಂಪನಿ ಪ್ರಾರಂಭಿಸಿದೆ. ಮಂಕಿಯಲ್ಲಿ 5 ಎಂಟಿಪಿಎ ಹಾಗೂ ಪಾವಿನಕುರ್ವೆಯಲ್ಲಿ 14 ಎಂಟಿಪಿಎ ಸಾಮರ್ಥ್ಯದ ಬಂದರು ನಿರ್ಮಾಣ ಜವಾಬ್ದಾರಿಯನ್ನು ಖಾಸಗಿಗೆ ವಹಿಸಲಾಗುವುದು ಎಂದರು.

ದಕ್ಷಿಣ ಮಂಗಳೂರಿನಲ್ಲಿ ದೇಶದ ಮೊದಲ ಅಂತಾರಾಷ್ಟ್ರೀಯ ಪ್ರವಾಸಿಗರ ಹಡಗಿನ ಬಂದರು ನಿರ್ಮಾಣ ಮಾಡಲಾಗುತ್ತಿದೆ. ಹಂಗಾರಕಟ್ಟೆ, ಮಂಗಳೂರು ಸೇರಿ ವಿವಿಧೆಡೆ ಹಡಗು ನಿರ್ಮಾಣ ಕೈಗಾರಿಕೆ ಪ್ರಾರಂಭಕ್ಕೆ ಸಿದ್ಧತೆ ನಡೆದಿದೆ. ಪೌರಾತ್ಯ ರಾಷ್ಟ್ರಗಳು ಈ ಉದ್ಯಮವನ್ನು ಚೀನಾದ ಬದಲಿಗೆ ಭಾರತಕ್ಕೆ ನೀಡ ಬಯಸುತ್ತಿವೆ. ಅಲ್ಲದೆ ಮೀನುಗಾರಿಕೆಗೆ ಬೆಂಬಲ ನೀಡಿ ಆ ಸಂಬಂಧದ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಕದಂಬ ನೌಕಾನೆಲೆ ಮುಖ್ಯಸ್ಥ ಕಮೊಡೋರ್ ಆಶಿಷ್ ಗೋಯಲ್, ಮಂಗಳೂರಿನ ಡೆಪ್ಯುಟಿ ಚೀಫ್ ಎಕ್ಸ್‌ಪ್ಲೋಸಿವ್ ಅಧಿಕಾರಿ ಪಿ.ಕೆ.ರಾಣಾ, ಬಿಣಗಾ ಗ್ರಾಸಿಂ ಇಂಡಸ್ಟ್ರೀ ಮುಖ್ಯಸ್ಥ ಖುಷ್ ಶರ್ಮಾ, ಕೆಎಂಬಿ ಮುಖ್ಯ ಇಂಜಿನಿಯರ್ ಪ್ರಮಿತ್, ಮುಖ್ಯ ಲೆಕ್ಕಾಧಿಕಾರಿ ಡಾ.ಸಂಗೀತಾ ಭಟ್, ಬಂದರು ಅಧಿಕಾರಿ ರಾಜಕುಮಾರ್ ಹೆಗಡೆ, ಹಡಗೊಂದರ ಕ್ಯಾಪ್ಟನ್ ರಾಜವೀರ ಸಿಂಗ್ ವೇದಿಕೆಯಲ್ಲಿದ್ದರು. ಬಂದರು ಇಲಾಖೆ ನಿರ್ದೇಶಕ ಕ್ಯಾ.ಸಿ.ಸ್ವಾಮಿ ಸ್ವಾಗತಿಸಿದರು. ಸುರೇಶ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಕಾರವಾರ ಬಂದರಿನಲ್ಲಿ ದೀರ್ಘ ಕಾಲದಿಂದ ಪೈಲಟ್ ಬೋಟ್ ಓಡಿಸಿದ್ದ ತಾಕು ಹರಿಕಂತ್ರ ಹಾಗೂ ಮಹೇಶ ಹರಿಕಂತ್ರ ಅವರನ್ನು ಕಾರವಾರ ಕೆಎಂಬಿ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಕೆಎಂಬಿ ಸಿಇಒ ಜಯರಾಮ ರಾಯಪುರೆ, ರಿಯರ್ ಅಡ್ಮಿರಲ್ ಕೆ.ಎಂ.ರಾಮಕೃಷ್ಣ ಕಮೊಡೋರ್ ಆಶಿಶ್ ಗೋಯಲ್, ಪಿ.ಕೆ.ರಾಣಾ ಇದ್ದರು.

## ಸ್ಥಳೀಯ ಮಾಹಿತಿ ಕೇಂದ್ರ ಸ್ಥಾಪನೆ

ಅತಿಥಿಯಾಗಿದ್ದ ಕರ್ನಾಟಕ ನೌಕಾ ವಲಯ ಮುಖ್ಯಸ್ಥ ರಿಯರ್ ಅಡ್ಮಿರಲ್ ಕೆ.ಎಂ. ರಾಮಕೃಷ್ಣ, ಸಮುದ್ರದಲ್ಲಿ 12 ನಾಟಿಕಲ್ ಮೈಲ್ ಆಚೆಗಿನ ಭಾಗ ಅಂತಾರಾಷ್ಟ್ರೀಯ ವ್ಯಾಪ್ತಿಗೆ ಬರುತ್ತದೆ. ಅಲ್ಲಿನ ಎಲ್ಲ ವ್ಯವಹಾರಗಳು ಅಂತಾರಾಷ್ಟ್ರೀಯ ಸಮುದ್ರ ಕಾನೂನಿನಂತೆ ನಡೆಯಬೇಕು. ಇದರಿಂದ ಸಮುದ್ರ ವ್ಯವಹಾರಗಳ ಮಾಹಿತಿ ಸಂಗ್ರಹಿಸಲು ಭಾರತವು ಗುರಗಾಂವ್‌ನಲ್ಲಿ ಅಂತಾರಾಷ್ಟ್ರೀಯ ಮಾಹಿತಿ ಹಂಚಿಕೆ ಕೇಂದ್ರವನ್ನು ಪ್ರಾರಂಭಿಸಿದೆ. ಅದರಲ್ಲಿ ನೌಕಾನೆಲೆ, ಕೋಸ್ಟ್‌ಗಾರ್ಡ್ ಸೇರಿ 13 ಭಾಗಿದಾರರಿದ್ದಾರೆ. ಸ್ಥಳೀಯ ಮಾಹಿತಿ ಹಂಚಿಕೆ ಕೇಂದ್ರ ತೆರೆಯುವ ಪ್ರಸ್ತಾವನೆ ಇದ್ದು, ಅದಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಬೇಕಿದೆ ಎಂದರು.

## ಹೊಸ ಪೈಲಟ್ ಬೋಟ್

ಕಾರವಾರ ಬಂದರಿಗೆ ಆಗಮಿಸುವ ಹಡಗುಗಳನ್ನು ಕರೆತರಲು ಇದುವರೆಗೆ ಮೀನುಗಾರಿಕೆ ಬೋಟ್‌ನ್ನು ಪೈಲಟ್ ಬೋಟ್ ಆಗಿ ಬಳಸಲಾಗುತ್ತಿತ್ತು. ಈಗ ಹೊಸ ಪೈಲಟ್ ಬೋಟ್ ಬಳಕೆಗೆ ಟೆಂಡರ್ ಕರೆಯಲಾಗಿದೆ. ಸುಮಾರು 50 ವರ್ಷಗಳಿಗೂ ಹೆಚ್ಚು ಕಾಲದಿಂದ ಕಾರವಾರ ಬಂದರಿನ ಪೈಲಟ್ ಬೋಟ್‌ನಲ್ಲಿ ಕಾರ್ಯನಿರ್ವಹಿಸಿದ ತಾಕು ಹಾಗೂ ಮಹೇಶ ಹರಿಕಂತ್ರ ಅವರನ್ನು ಶುಕ್ರವಾರ ಸನ್ಮಾನಿಸಲಾಯಿತು.

ವಿಜಯವಾಣಿ

## ಅಪಘಾತದಲ್ಲಿ ಇಬ್ಬರ ಸಾವು

ಮುಂಡಗೋಡ: ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ

| **KARNATAKA MARITIME BOARD<br>BENGALURU** | | |
|---|---|---|
| Name of the Newspaper | UDAYAVANI | |
| Date | 06-04-2024 | **Language – KANNADA** |

# ಜಲಸಾರಿಗೆ ಸದ್ಬಳಕೆಯಿಂದ ಆರ್ಥಿಕ ಶಕ್ತಿ ಸದೃಢ

## 61ನೇ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಂಡಳಿ ಸಿಇಒ ಜಯರಾಮ್ ರಾಯಪುರ ಸಲಹೆ

■ **ಉದಯವಾಣಿ ಸಮಾಚಾರ**

**ಕಾರವಾರ:** ಜಾಗತಿಕ ಸರಬರಾಜು ವ್ಯವಸ್ಥೆಯ ಅತ್ಯಂತ ಪ್ರಮುಖ ಸಾಧನವಾಗಿರುವ ಜಲಸಾರಿಗೆಯನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಮೂಲಕ ದೇಶ ಮತ್ತು ರಾಜ್ಯದ ಆರ್ಥಿಕ ಶಕ್ತಿ ಸದೃಢಗೊಳ್ಳಲು ಸಾಧ್ಯವಾಗಲಿದೆ ಎಂದು ಬಂದರು ಮಂಡಳಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಹೇಳಿದರು.

ಕಾರವಾರ ಬಂದರು ಮಂಡಳಿ ಕಚೇರಿ ಆವರಣದಲ್ಲಿ ಶುಕ್ರವಾರ ನಡೆದ 61ನೇ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತದಲ್ಲಿ ಜಲಸಾರಿಗೆ ವ್ಯವಸ್ಥೆ ನಿಧಾನವಾಗಿ ಆರಂಭವಾದರೂ ಪ್ರಸ್ತುತ ಅಂತಾರಾಷ್ಟ್ರೀಯ ಮಟ್ಟದ ಆರ್ಥಿಕ ವ್ಯವಸ್ಥೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದು, ಆಮದು ಮತ್ತು ರಫ್ತು ವಹಿವಾಟಿನಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಆದರೆ ದೇಶದಲ್ಲಿ ಜನಸಾರಿಗೆ ವ್ಯವಸ್ಥೆ ಬೆಳವಣಿಗೆಗೆ ಇನ್ನೂ ವಿಪುಲ ಅವಕಾಶಗಳಿದ್ದು, ಇವುಗಳನ್ನು ಬಳಸಿಕೊಂಡಲ್ಲಿ ದೇಶದ ಆರ್ಥಿಕ ಬಲವರ್ಧನೆ ಇನ್ನಷ್ಟು ವೃದ್ಧಿಸಲಿದೆ ಎಂದರು.

ರಾಜ್ಯದಲ್ಲಿ ಕಾರವಾರ ಬಂದರು ಮೂಲಕ ಹೆಚ್ಚಿನ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅವಕಾಶಗಳಿದ್ದು, ಈ ಬಂದರನ್ನು 5 ಹಂತದಲ್ಲಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ. ಮುಂದಿನ 5 ವರ್ಷದಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದ್ದು, ಈಗಾಗಲೇ 8 ಮೀಟರ್‌ವರೆಗೆ ಡ್ರಜಿಂಗ್ ನಡೆಸಲಾಗಿದೆ. ಅಲ್ಲದೇ ಕೇಣಿ ಬಂದರು, ಪಾವಿನಕುರ್ವೆ, ಮಂಕಿ ಹೊನ್ನಾವರ ಬಂದರುಗಳನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು. ಮಂಗಳೂರು ದಕ್ಷಿಣದಲ್ಲಿ ಅಂತಾರಾಷ್ಟ್ರೀಯ ಕ್ರೂಸ್ ಮತ್ತು ಟೂರಿಸಂ ಪೋರ್ಟ್ ನಿರ್ಮಾಣ ಮಾಡಲಾಗುತ್ತಿದ್ದು, ಕರಾವಳಿ ಪ್ರದೇಶಗಳಲ್ಲಿ ಹಡಗುಗಳ ನಿರ್ಮಾಣ ಮತ್ತು ದುರಸ್ತಿ ಉದ್ಯಮಕ್ಕೆ ಉತ್ತಮ ಅವಕಾಶವಿದೆ. ಈ ಭಾಗದಲ್ಲಿ ಗಾಳಿಯಿಂದ ವಿದ್ಯುತ್ ಉತ್ಪಾದನೆಗೆ ಹಾಗೂ ಪ್ರವಾಸೋದ್ಯಮ ಮತ್ತು ಮೀನುಗಾರಿಕಾ ಚಟುವಟಿಕೆಗಳ ಅಭಿವೃದ್ಧಿಗೆ ಬಂದರು ಮಂಡಳಿಯಿಂದ ಎಲ್ಲ ಸಹಕಾರ ನೀಡಲಾಗುವುದು ಎಂದರು.




ಕಾರವಾರ: ನಗರದ ಬಂದರು ಮಂಡಳಿ ಕಚೇರಿ ಆವರಣದಲ್ಲಿ ಶುಕ್ರವಾರ 61ನೇ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮ ನಡೆಯಿತು.

ನೌಕಾಧಿಕಾರಿ ಕೆ.ಎಂ. ರಾಮಕೃಷ್ಣನ್ ಮಾತನಾಡಿ, ಪ್ರಪಂಚದ ಶೇ.90 ಆರ್ಥಿಕ ಚಟುವಟಿಕೆ ನೌಕಾಯಾನದ ಮೂಲಕ ನಡೆಯುತ್ತಿದೆ. ಈ ವ್ಯವಸ್ಥೆ ಸುಗಮವಾಗಿ ನಡೆಯಲು ಅಂತಾರಾಷ್ಟ್ರೀಯ ಸಹಕಾರ ಅಗತ್ಯ. ಈ ಕುರಿತಂತೆ ನೇವಿಯಿಂದ ವಿವಿಧ ರಾಷ್ಟ್ರಗಳ ನಡುವೆ ಅಗತ್ಯ ಮಾಹಿತಿಗಳ ವಿನಿಮಯ ಮತ್ತು ಸಂಕಷ್ಟಕ್ಕೆ ಸಿಲುಕುವ ಹಡಗುಗಳು ಮತ್ತು ನೌಕಾ ಸಿಬ್ಬಂದಿ ರಕ್ಷಣೆ ಮಾಡಲಾಗುತ್ತಿದೆ ಎಂದರು.

ಕಾರವಾರ ನೇವಲ್ ಬೇಸ್‌ನ ಚೀಫ್ ಸ್ಟಾಫ್ ಆಫೀಸರ್ ಕಮಾಂಡರ್ ಆಶೀಶ್ ಗೋಯೆಲ್, ಕಾರವಾರ ಪೋರ್ಟ್ ಅಧಿಕಾರಿ ರಾಜ್‌ಕುಮಾರ್ ಹೆಡೆ, ಬಂದರು ಮಂಡಳಿ ಚೀಫ್ ಎಂಜಿನಿಯರ್ ಪ್ರವೀಣ್, ಲೆಕ್ಕಾಧಿಕಾರಿ ಸಂಗೀತಾ ಭಟ್ ಇತರರಿದ್ದರು.

ಬಂದರು ನಿರ್ದೇಶಕ ಕ್ಯಾ। ಸ್ವಾಮಿ ಸ್ವಾಗತಿಸಿದರು. ಸುರೇಶ್ ಶೆಟ್ಟಿ ನಿರೂಪಿಸಿದರು.

**KARNATAKA MARITIME BOARD**
**BENGALURU**

| | | |
|---|---|---|
| Name of the Newspaper | KARAVALI MUNJAVU | |
| Date | 06-04-2024 | **Language – KANNADA** |



# ಎನ್‌ಜಿಟಿ ಆದೇಶ ಬಂದ ಮರುದಿನವೇ ಕಾರವಾರ ಬಂದರು ಅಭಿವೃದ್ಧಿಗೆ ಚಾಲನೆ: ಜಯರಾಮ್ ರಾಯಪುರ




ಕರಾವಳಿ ಮುಂಜಾವು ವರದಿ

ಕಾರವಾರ: ರಾಷ್ಟ್ರೀಯ ಹಸಿರು ಪೀಠದ ಆದೇಶ ಬಂದ ಮರುದಿನವೇ ಕಾರವಾರ ಬಂದರು ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಹೇಳಿದರು. ಕಾರವಾರದ ಬಂದರು ಮಂಡಳಿ ಕಚೇರಿ ಆವರಣದಲ್ಲಿ ಶುಕ್ರವಾರ ನಡೆದ ರಾಷ್ಟ್ರೀಯ ಕಡಲ ದಿನ ಹಾಗೂ 61ನೇ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯದಲ್ಲಿ ಕಾರವಾರ ಬಂದರು ಮೂಲಕ ಹೆಚ್ಚಿನ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅವಕಾಶಗಳಿದ್ದು, ಈ ಬಂದರನ್ನು 5 ಹಂತದಲ್ಲಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದ್ದು, ಮುಂದಿನ 5 ವರ್ಷದಲ್ಲಿ ಕಾರವಾರ ಬಂದರನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು ಎಂದರು. ಈಗಾಗಲೇ ಕಾರವಾರ ಬಂದರಿನಲ್ಲಿ 8 ಮೀ.ವರೆಗೆ ಡ್ರಜಿಂಗ್ ನಡೆಸಲಾಗಿದೆ. ಅಲ್ಲದೇ ಕೇಣಿ ಬಂದರು, ಪಾವಿನಕುರ್ವೆ, ಮಂಕಿ ಹೊನ್ನಾವರ ಬಂದರುಗಳನ್ನೂ ಕೂಡಾ ಅಭಿವೃದ್ಧಿಪಡಿಸಲಾಗುತ್ತಿದೆ.

ಕಾರವಾರ ಹಾಗೂ ಕೇಣಿ ಬಂದರುಗಳ ಅಭಿವೃದ್ಧಿ ನಂತರ ಜಲಸಾರಿಗೆ ಕ್ಷೇತ್ರದಲ್ಲಿ ಉತ್ತರ ಕನ್ನಡ ಜಿಲ್ಲೆ ಬಹು ದೊಡ್ಡ ಕೊಡುಗೆ ನೀಡಲು ಸಾಧ್ಯವಾಗಲಿದೆ. ಇನ್ನು ಕೆಲವೇ ತಿಂಗಳಲ್ಲಿ ಖಾಸಗಿ ಸಂಸ್ಥೆಯೊಂದು ಪಾವಿನಕುರ್ವೆ ಬಂದರು ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಿದೆ. ಇನ್ನು ಕೆಲವೇ ತಿಂಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಐದು ಬಂದರುಗಳು ಕಾರ್ಯ ನಿರ್ವಹಿಸಲಿದೆ ಎಂದರು. ಜಾಗತಿಕ ಸರಬರಾಜು ವ್ಯವಸ್ಥೆಯ ಅತ್ಯಂತ ಪ್ರಮುಖ ಸಾಧನವಾಗಿರುವ ಜಲಸಾರಿಗೆಯನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಮೂಲಕ ದೇಶದ ಮತ್ತು ರಾಜ್ಯದ ಆರ್ಥಿಕ ಶಕ್ತಿ ಸದೃಢಗೊಳ್ಳಲು ಸಾಧ್ಯವಾಗಲಿದೆ.

ಆದರೆ ರಾಜ್ಯ ಸರಕಾರ ಜಲ ಸಾರಿಗೆ ಮಹತ್ವವನ್ನು ಬಹಳ ವಿಳಂಬವಾಗಿ ಅರ್ಥ ಮಾಡಿಕೊಂಡಿದೆ. ಕಳೆದ ಕೇವಲ ಐದು ವರ್ಷಗಳಿಂದ ರಾಜ್ಯದಲ್ಲಿ ಜಲಸಾರಿಗೆ ಅಭಿವೃದ್ಧಿ ಕಾರ್ಯ ಕೇವಲ ಆರಂಭಿಕ ಹಂತದಲ್ಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

## ಅಂತಾರಾಷ್ಟ್ರೀಯ ಕ್ರೂಸ್ ಮತ್ತು ಟೂರಿಸಂ ಪೋರ್ಟ್

"ಮಂಗಳೂರು ದಕ್ಷಿಣದಲ್ಲಿ ಅಂತಾರಾಷ್ಟ್ರೀಯ ಕ್ರೂಸ್ ಮತ್ತು ಟೂರಿಸಂ ಪೋರ್ಟ್ ನಿರ್ಮಾಣ ಮಾಡಲಾಗುತ್ತಿದ್ದು, ಕರಾವಳಿ ಪ್ರದೇಶಗಳಲ್ಲಿ ಹಡಗುಗಳ ನಿರ್ಮಾಣ ಮತ್ತು ದುರಸ್ತಿ ಉದ್ಯಮಕ್ಕೆ ಉತ್ತಮ ಅವಕಾಶವಿದ್ದು, ಈ ಭಾಗದಲ್ಲಿ ಗಾಳಿಯಿಂದ ವಿದ್ಯುತ್ ಉತ್ಪಾದನೆಗೆ ಹಾಗು ಪ್ರವಾಸೋದ್ಯಮ ಮತ್ತು ಮೀನುಗಾರಿಕಾ ಚಟುವಟಿಕೆಗಳ ಅಭಿವೃದ್ಧಿಗೆ ಬಂದರು ಮಂಡಳಿಯಿಂದ ಎಲ್ಲಾ ರೀತಿಯ ಸಹಕಾರವನ್ನೂ ನೀಡಲಾಗುವುದು"

■ ಜಯರಾಮ್ ರಾಯಪುರ,
ಸಿಇಓ ಬಂದರು ಮಂಡಳಿ

ದೇಶದಲ್ಲಿ ಜಲಸಾರಿಗೆ ವ್ಯವಸ್ಥೆಯ ಬೆಳವಣಿಗೆಗೆ ಇನ್ನೂ ವಿಫುಲ ಅವಕಾಶಗಳಿದ್ದು, ಇವುಗಳನ್ನು ಬಳಸಿಕೊಂಡಲ್ಲಿ ದೇಶದ ಆರ್ಥಿಕ ಬಲವರ್ಧನೆ ಇನ್ನಷ್ಟು ವೃದ್ಧಿಸಲಿದೆ ಎಂದರು.

ರಾಜ್ಯದ ಕರಾವಳಿ ತೀರದಲ್ಲಿ ಸಿಆರ್‌ಝೆಡ್ ನಿಯಮ ಅನುಸರಿಸಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಫುಲ ಅವಕಾಶಗಳಿದ್ದು, ಅನುಮತಿ ನೀಡುವಲ್ಲಿ ಉದಾರತೆ ಬೇಕಾಗಿದೆ ಎಂದರು. ಕರ್ನಾಟಕ ನೇವಲ್ ಏರಿಯದ ಕಮಾಂಡಿಂಗ್ ಫ್ಲಾಗ್ ಆಫೀಸರ್ ರಿಯರ್ ಅಡ್ಮಿರಲ್ ಕೆ.ಎಂ. ರಾಮಕೃಷ್ಣನ್ ಮಾತನಾಡಿ, ಪ್ರಪಂಚದ ಶೇ.90 ರಷ್ಟು ಆರ್ಥಿಕ ಚಟುವಟಿಕೆ ನೌಕಾಯಾನದ ಮೂಲಕ ನಡೆಯುತ್ತಿದೆ.

ಈ ವ್ಯವಸ್ಥೆ ಸುಗಮವಾಗಿ ನಡೆಯಲು ಅಂತಾರಾಷ್ಟ್ರೀಯ ಸಹಕಾರ ಅಗತ್ಯವಾಗಿದ್ದು, ಈ ಕುರಿತಂತೆ ನೇವಿಯಿಂದ ವಿವಿಧ ರಾಷ್ಟ್ರಗಳ ನಡುವೆ ಅಗತ್ಯ ಮಾಹಿತಿಗಳ ವಿನಿಮಯ ಮತ್ತು ಸಂಕಷ್ಟಕ್ಕೆ ಸಿಲಕುವ ಹಡಗುಗಳು ಮತ್ತು ನೌಕಾ ಸಿಬ್ಬಂದಿಗಳ ರಕ್ಷಣೆಯನ್ನು ಮಾಡಲಾಗುತ್ತಿದೆ ಎಂದರು.

ಕಾರವಾರ ನೇವಲ್ ಬೇಸ್‌ನ ಚೀಫ್ ಸ್ಟಾಫ್ ಆಫೀಸರ್ ಕಮಾಂಡರ್ ಆಶೀಶ್ ಗೋಯೆಲ್, ಕಾರವಾರ ಪೋರ್ಟ್ ಅಧಿಕಾರಿ ರಾಜ್‌ಕುಮಾರ್ ಹೆಡೆ, ಬಂದರು ಮಂಡಳಿಯ ಚೀಫ್ ಇಂಜಿನಿಯರ್ ಪ್ರವೀತ್, ಲೆಕ್ಕಾಧಿಕಾರಿ ಸಂಗೀತಾ ಭಟ್ಟ ಮತ್ತಿತರರು ಉಪಸ್ಥಿತರಿದ್ದರು. ಬಂದರು ನಿರ್ದೇಶಕ ಕ್ಯಾ.ಸ್ವಾಮಿ ಸ್ವಾಗತಿಸಿದರು. ಸುರೇಶ ಶೆಟ್ಟಿ ನಿರೂಪಿಸಿದರು.

| KARNATAKA MARITIME BOARD<br>BENGALURU | | |
|---|---|---|
| Name of the Newspaper | KANNADA JANANTARANGA | |
| Date | 06-04-2024 | **Language – KANNADA** |

ಕನ್ನಡ ಜನಾಂತರಂಗ

# ಜಲಸಾರಿಗೆಯ ವ್ಯವಸ್ಥಿತ ಬಳಕೆಯಿಂದ ಆರ್ಥಿಕ ಬಲವರ್ಧನೆ: ಜಯರಾಮ್

ಕನ್ನಡ ಜನಾಂತರಂಗ ವರದಿ

ಕಾರವಾರ: "ಜಾಗತಿಕ ಸರಬರಾಜು ವ್ಯವಸ್ಥೆಯ ಅತ್ಯಂತ ಪ್ರಮುಖ ಸಾಧನವಾಗಿರುವ ಜಲಸಾರಿಗೆಯನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದರಿಂದ ದೇಶದ ಮತ್ತು ರಾಜ್ಯದ ಆರ್ಥಿಕ ಶಕ್ತಿ ಸದೃಢಗೊಳ್ಳಲು ಸಾಧ್ಯವಾಗಲಿದೆ" ಎಂದು ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಹೇಳಿದರು.




ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಮಾತನಾಡುತ್ತಿರುವುದು.

ಶುಕ್ರವಾರ ಕಾರವಾರದ ಬಂದರು ಮಂಡಳಿ ಕಚೇರಿ ಆವರಣದಲ್ಲಿ ನಡೆದ 61ನೇ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, "ಭಾರತದಲ್ಲಿ ಜಲಸಾರಿಗೆ ವ್ಯವಸ್ಥೆಯು ನಿಧಾನವಾಗಿ ಆರಂಭವಾದರೂ ಪ್ರಸ್ತುತ ಅಂತಾರಾಷ್ಟ್ರೀಯ ಮಟ್ಟದ ಆರ್ಥಿಕ ವ್ಯವಸ್ಥೆಯೊಂದಿಗೆ ಅವಿನಭಾವ ಸಂಬಂಧ ಹೊಂದಿದ್ದು, ಆಮದು ಮತ್ತು ರಫ್ತು ವಹಿವಾಟಿನಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಆದರೆ ದೇಶದಲ್ಲಿ ಜಲಸಾರಿಗೆ ವ್ಯವಸ್ಥೆಯ ಬೆಳವಣಿಗೆಗೆ ಇನ್ನೂ ವಿಫುಲ ಅವಕಾಶಗಳಿದ್ದು, ಇವುಗಳನ್ನು ಬಳಸಿಕೊಂಡಲ್ಲಿ ದೇಶದ ಆರ್ಥಿಕ ಬಲವರ್ಧನೆ ಇನ್ನಷ್ಟು ವೃದ್ಧಿಸಲಿದೆ" ಎಂದರು.

"ರಾಜ್ಯದಲ್ಲಿ ಕಾರವಾರ ಬಂದರು ಮೂಲಕ ಹೆಚ್ಚಿನ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅವಕಾಶಗಳಿದ್ದು, ಈ ಬಂದರನ್ನು 5 ಹಂತದಲ್ಲಿ ಅಭಿವೃದ್ದಿಪಡಿಸಲು ಯೋಜನೆ ರೂಪಿಸಲಾಗಿದೆ. ಮುಂದಿನ 5 ವರ್ಷದಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದ್ದು ಈಗಾಗಲೇ 8ಮೀ ವರೆಗೆ ಡ್ರೆಜಿಂಗ್ ನಡೆಸಲಾಗಿದೆ. ಅಲ್ಲದೇ ಕೇಣಿ ಬಂದರು, ಪಾವಿನಕುರ್ವೆ, ಮಂಕಿ ಹೊನ್ನಾವರ ಬಂದರುಗಳನ್ನೂ ಕೂಡಾ ಅಭಿವೃದ್ದಿಪಡಿಸಲಾಗುತ್ತಿದೆ" ಎಂದರು.

ಕರ್ನಾಟಕ ನೇವಲ್ ಏರಿಯದ ಕಮಾಂಡಿಂಗ್ ಫ್ಲಾಗ್ ಆಫೀಸರ್ ರಿಯರ್ ಅಡ್ಮಿರಲ್ ಕೆ ಎಂ ರಾಮಕೃಷ್ಣನ್ ಮಾತನಾಡಿ, "ಪ್ರಪಂಚದ ಶೇ 90ರಷ್ಟು ಆರ್ಥಿಕ ಚಟುವಟಿಕೆ ನೌಕಾಯಾನದ ಮೂಲಕ ನಡೆಯುತ್ತಿದೆ, ಈ ವ್ಯವಸ್ಥೆ ಸುಗಮವಾಗಿ ನಡೆಯಲು ಅಂತಾರಾಷ್ಟ್ರೀಯ ಸಹಕಾರ ಅಗತ್ಯವಾಗಿದ್ದು, ಈ ಕುರಿತಂತೆ ನೇವಿಯಿಂದ ವಿವಿಧ ರಾಷ್ಟ್ರಗಳ ನಡುವೆ ಅಗತ್ಯ ಮಾಹಿತಿಗಳ ವಿನಿಮಯ, ಸಂಕಷ್ಟಕ್ಕೆ ಸಿಲಕುವ ಹಡಗು, ನೌಕಾ ಸಿಬ್ಬಂದಿಗಳ ರಕ್ಷಣೆಯನ್ನು ಮಾಡಲಾಗುತ್ತಿದೆ" ಎಂದರು.

| KARNATAKA MARITIME BOARD<br>BENGALURU | | |
|---|---|---|
| Name of the Newspaper | NUDI JENU | |
| Date | 06-04-2024 | **Language – KANNADA** |

nudijenukannada | @nudijenu | 82170 67607

# ಜಲ ಸಾರಿಗೆಯಿಂದ ಆರ್ಥಿಕ ಶಕ್ತಿ ಸದೃಢ: ಜಯರಾಮ್ ರಾಯಪುರ

ನುಡಿಜೇನು ವರದಿ

**ಕಾರವಾರ:** ಜಾಗತಿಕ ಸರಬರಾಜು ವ್ಯವಸ್ಥೆಯ ಅತ್ಯಂತ ಪ್ರಮುಖ ಸಾಧನವಾಗಿರುವ ಜಲಸಾರಿಗೆಯನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಮೂಲಕ ದೇಶದ ಮತ್ತು ರಾಜ್ಯದ ಆರ್ಥಿಕ ಶಕ್ತಿ ಸದೃಢಗೊಳ್ಳಲು ಸಾಧ್ಯವಾಗಲಿದೆ ಎಂದು ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಹೇಳಿದರು.

ಕಾರವಾರದ ಬಂದರು ಮಂಡಳಿ ಕಚೇರಿ ಆವರಣದಲ್ಲಿ ನಡೆದ 61 ನೇ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭಾರತದಲ್ಲಿ ಜಲಸಾರಿಗೆ ವ್ಯವಸ್ಥೆಯು ನಿಧಾನವಾಗಿ ಆರಂಭವಾದರೂ ಸಹ ಪ್ರಸ್ತುತ ಅಂತಾರಾಷ್ಟ್ರೀಯ ಮಟ್ಟದ ಆರ್ಥಿಕ ವ್ಯವಸ್ಥೆಯೊಂದಿಗೆ ಅವಿನಭಾವ




ಸಂಬಂಧ ಹೊಂದಿದ್ದು, ಆಮದು ಮತ್ತು ರಫ್ತು ವಹಿವಾಟಿನಲ್ಲಿ ಗಣನೀಯ ಪ್ರಗತಿ ಸಾಧಿಸಿದೆ ಆದರೆ ದೇಶದಲ್ಲಿ ಜನಸಾರಿಗೆ ವ್ಯವಸ್ಥೆಯ ಬೆಳವಣಿಗೆಗೆ ಇನ್ನೂ ವಿಫುಲ ಅವಕಾಶಗಳಿದ್ದು, ಇವುಗಳನ್ನು ಬಳಸಿಕೊಂಡಲ್ಲಿ ದೇಶದ ಆರ್ಥಿಕ ಬಲವರ್ಧನೆ ಇನ್ನಷ್ಟು ವೃದ್ಧಿಸಲಿದೆ ಎಂದರು.

ರಾಜ್ಯದಲ್ಲಿ ಕಾರವಾರ ಬಂದರು ಮೂಲಕ ಹೆಚ್ಚಿನ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅವಕಾಶಗಳಿದ್ದು, ಈ ಬಂದರನ್ನು 5 ಹಂತದಲ್ಲಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದ್ದು, ಮುಂದಿನ 5 ವರ್ಷದಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದ್ದು ಈಗಾಗಲೇ 8 ಮೀಟರ್ ವರೆಗೆ ಡ್ರಜಿಂಗ್ ನಡೆಸಲಾಗಿದೆ. ಅಲ್ಲದೇ ಕೇಣಿ ಬಂದರು, ಪಾವಿನಕುರ್ವೆ, ಮಂಕಿ ಹೊನ್ನಾವರ ಬಂದರುಗಳನ್ನೂ ಕೂಡಾ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

ಮಂಗಳೂರು ದಕ್ಷಿಣದಲ್ಲಿ ಅಂತಾರಾಷ್ಟ್ರೀಯ ಕ್ರೂಸ್ ಮತ್ತು ಟೂರಿಸಂ ಪೋರ್ಟ್ ನಿರ್ಮಾಣ ಮಾಡಲಾಗುತ್ತಿದ್ದು, ಕರಾವಳಿ ಪ್ರದೇಶಗಳಲ್ಲಿ ಹಡಗುಗಳ ನಿರ್ಮಾಣ ಮತ್ತು ದುರಸ್ತಿ ಉದ್ಯಮಕ್ಕೆ ಉತ್ತಮ ಅವಕಾಶವಿದ್ದು, ಈ ಭಾಗದಲ್ಲಿ ಗಾಳಿಯಿಂದ ವಿದ್ಯುತ್ ಉತ್ಪಾದನೆಗೆ ಹಾಗೂ ಪ್ರವಾಸೋದ್ಯಮ ಮತ್ತು ಮೀನುಗಾರಿಕಾ ಚಟುವಟಿಕೆಗಳ ಅಭಿವೃದ್ಧಿಗೆ ಬಂದರು ಮಂಡಳಿಯಿಂದ ಎಲ್ಲಾ ರೀತಿಯ ಸಹಕಾರವನ್ನೂ ನೀಡಲಾಗುವುದು ಎಂದರು.

ಕರ್ನಾಟಕ ನೇವಲ್ ಏರಿಯದ ಕಮಾಂಡಿಂಗ್ ಫ್ಲಾಗ್ ಆಫೀಸರ್ ರಿಯರ್ ಅಡ್ಮಿರಲ್ ಕೆ.ಎಂ. ರಾಮಕೃಷ್ಣನ್ ಮಾತನಾಡಿ, ಪ್ರಪಂಚದ ಶೇ.90 ರಷ್ಟು ಆರ್ಥಿಕ ಚಟುವಟಿಕೆ ನೌಕಾಯಾನದ ಮೂಲಕ ನಡೆಯುತ್ತಿದೆ, ಈ ವ್ಯವಸ್ಥೆ ಸುಗಮವಾಗಿ ನಡೆಯಲು ಅಂತಾರಾಷ್ಟ್ರೀಯ ಸಹಕಾರ ಅಗತ್ಯವಾಗಿದ್ದು, ಈ ಕುರಿತಂತೆ ನೇವಿಯಿಂದ ವಿವಿಧ ರಾಷ್ಟ್ರಗಳ ನಡುವೆ ಅಗತ್ಯ ಮಾಹಿತಿಗಳ ವಿನಿಮಯ ಮತ್ತು ಸಂಕಷ್ಟಕ್ಕೆ ಸಿಲುಕುವ ಹಡಗುಗಳು ಮತ್ತು ನೌಕಾ ಸಿಬ್ಬಂದಿಗಳ ರಕ್ಷಣೆಯನ್ನು ಮಾಡಲಾಗುತ್ತಿದೆ ಎಂದರು.

ಕಾರವಾರ ನೇವಲ್ ಬೇಸ್‌ನ ಚೀಫ್ ಸ್ಟಾಫ್ ಆಫೀಸರ್ ಕಮಾಂಡರ್ ಆಶೀಶ್ ಗೋಯೆಲ್, ಕಾರವಾರ ಪೋರ್ಟ್ ಅಧಿಕಾರಿ ರಾಜ್‌ಕುಮಾರ್ ಹೆಡೆ, ಬಂದರು ಮಂಡಳಿಯ ಚೀಫ್ ಇಂಜಿನಿಯರ್ ಪ್ರವೀತ್, ಲೆಕ್ಕಾಧಿಕಾರಿ ಸಂಗೀತಾ ಭಟ್ ಮತ್ತಿತರರು ಉಪಸ್ಥಿತರಿದ್ದರು.

ಬಂದರು ನಿರ್ದೇಶಕ ಕ್ಯಾಸ್ವಾಮಿ ಸ್ವಾಗತಿಸಿದರು. ಸುರೇಶ್ ಶೆಟ್ಟಿ ನಿರೂಪಿಸಿದರು.

| **KARNATAKA MARITIME BOARD**<br>**BENGALURU** | | |
|---|---|---|
| Name of the Newspaper | SIRASI SAMACHARA | |
| Date | 06-04-2024 | **Language – KANNADA** |

# ಜಲ ಸಾರಿಗೆಯಿಂದ ಆರ್ಥಿಕ ಶಕ್ತಿ ಸದೃಢ: ರಾಯಪುರ




ಶಿರಸಿ ಸಮಾಚಾರ ⏭ ಕಾರವಾರ: ಜಾಗತಿಕ ಸರಬರಾಜು ವ್ಯವಸ್ಥೆಯ ಅತ್ಯಂತ ಪ್ರಮುಖ ಸಾಧನವಾಗಿರುವ ಜಲಸಾರಿಗೆಯನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಮೂಲಕ ದೇಶದ ಮತ್ತು ರಾಜ್ಯದ ಆರ್ಥಿಕ ಶಕ್ತಿ ಸದೃಢಗೊಳ್ಳಲು ಸಾಧ್ಯವಾಗಲಿದೆ ಎಂದು ಬಂದರು ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಹೇಳಿದರು.

ಅವರು ಶುಕ್ರವಾರ ಕಾರವಾರದ ಬಂದರು ಮಂಡಳಿ ಕಚೇರಿ ಆವರಣದಲ್ಲಿ ನಡೆದ 61ನೇ ರಾಷ್ಟ್ರೀಯ ನೌಕಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭಾರತದಲ್ಲಿ ಜಲಸಾರಿಗೆ ವ್ಯವಸ್ಥೆಯು ನಿಧಾನವಾಗಿ ಆರಂಭವಾದರೂ ಸಹ ಪ್ರಸ್ತುತ ಅಂತಾರಾಷ್ಟ್ರೀಯ ಮಟ್ಟದ ಆರ್ಥಿಕ ವ್ಯವಸ್ಥೆಯೊಂದಿಗೆ ಅವಿನಭಾವ ಸಂಬಂಧ ಹೊಂದಿದ್ದು, ಆಮದು ಮತ್ತು ರಫ್ತು ವಹಿವಾಟಿನಲ್ಲಿ ಗಣನೀಯ ಪ್ರಗತಿ ಸಾಧಿಸಿದೆ ಆದರೆ ದೇಶದಲ್ಲಿ ಜನಸಾರಿಗೆ ವ್ಯವಸ್ಥೆಯ ಬೆಳವಣಿಗೆಗೆ ಇನ್ನೂ ವಿಫುಲ ಅವಕಾಶ ಗಳಿದ್ದು, ಇವುಗಳನ್ನು ಬಳಸಿಕೊಂಡಲ್ಲಿ ದೇಶದ ಆರ್ಥಿಕ ಬಲವರ್ಧನೆ ಇನ್ನಷ್ಟು ವೃದ್ಧಿಸಲಿದೆ ಎಂದರು.

ರಾಜ್ಯದಲ್ಲಿ ಕಾರವಾರ ಬಂದರು ಮೂಲಕ ಹೆಚ್ಚಿನ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅವಕಾಶಗಳಿದ್ದು, ಈ ಬಂದರನ್ನು 5 ಹಂತದಲ್ಲಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದ್ದು, ಮುಂದಿನ 5 ವರ್ಷದಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದ್ದು ಈಗಾಗಲೇ 8 ಮೀಟರ್ ವರೆಗೆ ಡ್ರಜಿಂಗ್ ನಡೆಸಲಾಗಿದೆ. ಅಲ್ಲದೇ ಕೇಣಿ ಬಂದರು, ಪಾವಿನಕುರ್ವೆ, ಮಂಕಿ, ಹೊನ್ನಾವರ ಬಂದರುಗಳನ್ನೂ ಕೂಡಾ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

ಮಂಗಳೂರು ' ದಕ್ಷಿಣದಲ್ಲಿ ಅಂತಾರಾಷ್ಟ್ರೀಯ ಕ್ರೂಸ್ ಮತ್ತು ಟೂರಿಸಂ ಪೋರ್ಟ್ ನಿರ್ಮಾಣ ಮಾಡಲಾಗುತ್ತಿದ್ದು, ಕರಾವಳಿ ಪ್ರದೇಶಗಳಲ್ಲಿ ಹಡಗುಗಳ ನಿರ್ಮಾಣ ಮತ್ತು ದುರಸ್ತಿ ಉದ್ಯಮಕ್ಕೆ ಉತ್ತಮ ಅವಕಾಶವಿದ್ದು, ಈ ಭಾಗದಲ್ಲಿ ಗಾಳಿಯಿಂದ ವಿದ್ಯುತ್ ಉತ್ಪಾದನೆಗೆ ಹಾಗೂ ಪ್ರವಾಸೋದ್ಯಮ ಮತ್ತು ಮೀನುಗಾರಿಕಾ ಚಟುವಟಿಕೆಗಳ ಅಭಿವೃದ್ಧಿಗೆ ಬಂದರು ಮಂಡಳಿಯಿಂದ ಎಲ್ಲಾ ರೀತಿಯ ಸಹಕಾರವನ್ನೂ ನೀಡಲಾಗುವುದು ಎಂದರು.

ಕರ್ನಾಟಕ ನೇವಲ್ ಏರಿಯದ ಕಮಾಂಡಿಂಗ್ ಫ್ಲಾಗ್ ಆಫೀಸರ್ ರಿಯರ್ ಅಡ್ಮಿರಲ್ ಕೆ.ಎಂ. ರಾಮಕೃಷ್ಣನ್ ಮಾತನಾಡಿ, ಪ್ರಪಂಚದ ಶೇ.90 ರಷ್ಟು ಆರ್ಥಿಕ ಚಟುವಟಿಕೆ ನೌಕಾಯಾನದ ಮೂಲಕ ನಡೆಯುತ್ತಿದೆ, ಈ ವ್ಯವಸ್ಥೆ ಸುಗಮವಾಗಿ ನಡೆಯಲು ಅಂತಾರಾಷ್ಟ್ರೀಯ ಸಹಕಾರ ಅಗತ್ಯವಾಗಿದ್ದು, ಈ ಕುರಿತಂತೆ ನೇವಿಯಿಂದ ವಿವಿಧ ರಾಷ್ಟ್ರಗಳ ನಡುವೆ ಅಗತ್ಯ ಮಾಹಿತಿಗಳ ವಿನಿಮಯ ಮತ್ತು ಸಂಕಷ್ಟಕ್ಕೆ ಸಿಲಕುವ ಹಡಗುಗಳು ಮತ್ತು ನೌಕಾ ಸಿಬ್ಬಂದಿಗಳ ರಕ್ಷಣೆಯನ್ನು ಮಾಡಲಾಗುತ್ತಿದೆ ಎಂದರು.

ಕಾರವಾರ ನೇವಲ್ ಬೇಸ್ ನ ಚೀಫ್ ಸ್ಟಾಫ್ ಆಫೀಸರ್ ಕಮಾಂಡರ್ ಆಶೀಶ್ ಗೋಯೆಲ್, ಕಾರವಾರ ಪೋರ್ಟ್ ಅಧಿಕಾರಿ ರಾಜ್‌ಕುಮಾರ್ ಹೆಡೆ, ಬಂದರು ಮಂಡಳಿಯ ಚೀಫ್ ಇಂಜಿನಿಯರ್ ಪ್ರವೀತ್, ಲೆಕ್ಕಾಧಿಕಾರಿ ಸಂಗೀತಾ ಭಟ್ ಮತ್ತಿತರರು ಉಪಸ್ಥಿತರಿದ್ದರು. ಬಂದರು ನಿರ್ದೇಶಕ ಕ್ಯಾ.ಸ್ವಾಮಿ ಸ್ವಾಗತಿಸಿದರು. ಸುರೇಶ್ ಶೆಟ್ಟಿ ನಿರೂಪಿಸಿದರು.